ಓ.ಎಸ್.ನಂ. 34/2017 ಡಿ.ಡಬ್ಲ್ಯೂ.1

ಸಾಕ್ಷಿಯ ಹೆಸರುಃ ಕಾರ್ತಿಕ್ ಕುಮಾರ್ ಸಿ.ಪಿ.

ದಿನಾಂಕಃ **05-09-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್.ಎನ್. ವಕೀಲರಿಂದಃ

3) ವಾದಿಗಳು ಯಾವ ಉದ್ದೇಶಕ್ಕಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಗೊತ್ತು. ಅವರು ನಾವು ದಾವಾಸ್ವತ್ತನ್ನು ಮಾರಾಟ ಮಾಡಿರುವುದು ಸರಿಯಲ್ಲ ಹಾಗೂ ದಾವಾಸ್ವತ್ತುಗಳಲ್ಲಿ ಭಾಗ ಬೇಕು ಎಂದು ಸಲ್ಲಿಸಿರುತ್ತಾರೆ. ಅಜ್ಜನಾಯಕ ನನ್ನ ಮುತ್ತಾತ. 1 ನೇ ಪ್ರತಿವಾದಿ ನನ್ನ ತಾಯಿ. 2 ರಿಂದ 4 ನೇ ಪ್ರತಿವಾದಿಯರು ನನ್ನ ಸಹೋದರಿಯರು ಮತ್ತು 7 ನೇ ಪ್ರತಿವಾದಿ ನನ್ನ ತಂದೆ. ದಾವಾಸ್ವತ್ತುಗಳು ಮೂಲತಃ ಅಜ್ಜನಾಯಕರಿಗೆ ಸೇರಿತ್ತು ಎಂದರೆ ಸರಿ. ನನ್ನ ಅಜ್ಜ ಕಾಳನಾಯಕರವರಿಗೆ 1 ರಿಂದ 3 ನೇ ವಾದಿಗಳು ಮತ್ತು 1 ನೇ ಪ್ರತಿವಾದಿ ನನ್ನ ತಾಯಿ ಮಕ್ಕಳು ಎಂದರೆ ಸರಿ. 4 ಮತ್ತು

5 ನೇ ವಾದಿಗಳು ನನ್ನ ಮುತ್ತಜ್ಜ ಅಜ್ಜನಾಯಕರವರ ಎರಡನೇ ಮಗ ಸಣ್ಣಪ್ಪನಾಯಕರವರ ಮಕ್ಕಳು ಎಂದರೆ ಸರಿ.

4) ದಾವಾ ಐಟಂ ನಂ.1 ಮತ್ತು 2 ಅಜ್ಜನಾಯಕರವರ ಸ್ವತ್ತಾಗಿದ್ದರಿಂದ, ಅವರ ಇಬ್ಬರು ಮಕ್ಕಳಾದ ಕಾಳನಾಯಕ ಮತ್ತು ಸಣ್ಣಪ್ಪನಾಯಕ ಇಬ್ಬರಿಗೂ ಸಮನಾದ ಹಕ್ಕು ಇದೆ ಎಂದರೆ ಸಾಕ್ಷಿ ಅವರು ಮೌಖಿಕವಾಗಿ ಹಂಚಿಕೊಂಡಿದ್ದು, ನಂತರ ದಾವಾಸ್ವತ್ತುಗಳು ನನ್ನ ಅಜ್ಜ ಕಾಳನಾಯಕರವರಿಗೆ ಖಾತೆಯಾಗಿದೆ ಎನ್ನುತ್ತಾರೆ. ಅಜ್ಜನಾಯಕರವರ ಮಕ್ಕಳು ಮೌಖಿಕವಾಗಿ ವಿಭಾಗ ಮಾಡಿಕೊಂಡಾಗ ದಾವಾಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿಲ್ಲ ಹಾಗೂ ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ದಾವಾ ಎ ಷೆಡ್ಯೂಲ್ ಸ್ವತ್ತನ್ನು ಮಾತ್ರ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ ಸದರಿ ವಿಭಾಗದಲ್ಲಿ ಪ್ರತಿವಾದಪತ್ರದ ಎ ಷೆಡ್ಯೂಲ್ ಸ್ವತ್ತುಗಳನ್ನು ಕಾಳನಾಯಕ ಮತ್ತು ಸಣ್ಣಪ್ಪನಾಯಕರವರ ಹಿಸ್ಸೆಗೆ ಕೊಟ್ಟಿದ್ದರು ಎಂದರೆ ಸುಳ್ಳು. ದಾವಾಪತ್ರದಲ್ಲಿರುವ ಷೆಡ್ಯೂಲ್ ಸ್ವತ್ತುಗಳನ್ನು ಅಜ್ಜನಾಯಕರವರು ತಮ್ಮ ಹಿಸ್ಸೆಗೆ ಇಟ್ಟುಕೊಂಡಿದ್ದರು ಎಂದರೆ ಸುಳ್ಳು. ಅಜ್ಜನಾಯಕರವರು ತೀರಿಕೊಂಡ ನಂತರ ದಾವಾ ಐಟಂ ನಂ.1 ಮತ್ತು 2 ರಲ್ಲಿ ಅವರ ಇಬ್ಬರು ಮಕ್ಕಳಿಗೆ ಸಮನಾದ ಹಕ್ಕು ಇದೆ ಎಂದರೆ ಸಾಕ್ಷಿ ಆ ಸ್ವತ್ತಿನಲ್ಲಿ ನನ್ನ ತಾಯಿ ವಾಸಮಾಡುತ್ತಿದ್ದರು ಎನ್ನುತ್ತಾರೆ.

5) ದಾವಾಸ್ವತ್ತುಗಳನ್ನು ನನ್ನ ತಾಯಿಗೆ ನೀಡಿದ ಬಗ್ಗೆ ಯಾವುದಾದರೂ ದಾಖಲೆ ಇದೆಯೇ ಎಂದರೆ ಸಾಕ್ಷಿ 30 ವರ್ಷಗಳಿಂದ ನನ್ನ ತಾಯಿಯ ಹೆಸರಿನಲ್ಲಿ ಖಾತೆ ಇದೆ ಎನ್ನುತ್ತಾರೆ. ನಿಪಿ-02 ರಂತೆ ನನ್ನ ತಾಯಿಯ ಹೆಸರಿಗೆ ಖಾತೆ ದಿನಾಂಕಃ 19.05.2015 ಮತ್ತು ದಿನಾಂಕಃ 19.08.2015 ರಂದು ಆಗಿದೆ ಎಂದರೆ ಸಾಕ್ಷಿ ಆ ದಿನ ಅರ್ಜಿ ಸಲ್ಲಿಸಿದ್ದೆವು ಎನ್ನುತ್ತಾರೆ. 2015 ರಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಖಾತೆ ಮಾಡಿಸಿಕೊಂಡು ದಿನಾಂಕಃ 17.03.2015 ರಂದು ನಾವು ದಾವಾಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ನಿಪಿ-04 ಮತ್ತು ನಿಪಿ-05 ರಂತೆ ದಿನಾಂಕಃ16.03.2015 ರಂದು ದಾವಾಸ್ವತ್ತುಗಳನ್ನು ನಾವು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ನಾವು ಮೊದಲು ಮಾರಾಟ ಮಾಡಿ ನಂತರ ಪಂಚಾಯಿತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ಖಾತೆ ಬದಲಾವಣೆ ಮಾಡಿಕೊಂಡಿರುತ್ತೇವೆ ಎಂದರೆ

ಸರಿಯಲ್ಲ. ದಾವಾಸ್ವತ್ತುಗಳ ಮೇಲೆ ನನ್ನ ತಾಯಿಗೆ ಎಷ್ಟು ಭಾಗ ಇದೆಯೋ ಅಷ್ಟೇ ಭಾಗ 1 ರಿಂದ 5 ನೇ ವಾದಿಯರಿಗೂ ಕೂಡ ಇದೆ ಎಂದರೆ ಸುಳ್ಳು. ನಿಪಿ-04 ಮತ್ತು 5 ಕ್ಕೆ ವಾದಿಯರ ಸಹಿ ಇಲ್ಲ ಎಂದರೆ ಸರಿ. ಪ್ರತಿವಾದ ಪತ್ರದ ಬಿ ಷೆಡ್ಯೂಲ್ ಸ್ವತ್ತು ಸಣ್ಣಪ್ಪನಾಯಕರ ಸ್ವಯಾರ್ಜಿತ ಸ್ವತ್ತು ಎಂದರೆ ಸುಳ್ಳು. ಈ ಸ್ವತ್ತಿನಲ್ಲಿ ನನ್ನ ತಾಯಿ 1 ನೇ ಪ್ರತಿವಾದಿ ಮತ್ತು 1 ರಿಂದ 3 ನೇ ವಾದಿಗಳಿಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ಸ್ವತ್ತಿನ ಮೇಲೆ 4 ಮತ್ತು 5 ನೇ ವಾದಿಗಳಿಗೆ ಮಾತ್ರ ಹಕ್ಕು ಇದೆ ಎಂದರೆ ಸರಿಯಲ್ಲ

6) ಸಾಕ್ಷಿಗೆ ಈಗ ಪ್ರತಿವಾದ ಪತ್ರದ ಬಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಗ್ರ್ಯಾಂಡ್ ಸರ್ಟಿಫಿಕೇಟನ್ನು ತೋರಿಸಿ, ಈ ದಾಖಲೆಯಂತೆ ಸಣ್ಣಪ್ಪನಾಯಕರವರ ಹೆಂಡತಿ ಕಮಲಮ್ಮ (4 ಮತ್ತು 5 ನೇ ವಾದಿಯರ ತಾಯಿ) ರವರಿಗೆ ಮಂಜೂರಾಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಪಿ**-06** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪ್ರತಿವಾದ ಪತ್ರದ ಬಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಅಂದರೆ ಸರ್ವೆ ನಂ.788/65 ಎ ಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ತೋರಿಸಿ, ಇದು 4 ನೇ ವಾದಿ ಸ್ವಾಮಿನಾಯಕರವರ ಹೆಸರಿನಲ್ಲಿದೆ ಎಂದು ಕೇಳಿದಾಗ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಿಪಿ**-07** ಎಂದು ಗುರುತಿಸಲಾಯಿತು. ಪ್ರತಿವಾದ ಪತ್ರದಬಿ ಷೆಡ್ಯೂಲ್ ಸ್ವತ್ತು ನಿಪಿ-06 ಮತ್ತು ನಿಪಿ-07 ರ ಪ್ರಕಾರ ಅಜ್ಜಪ್ಪನಾಯಕರವರ ಎರಡನೇ ಮಗ ಸಣ್ಣಪ್ಪನಾಯಕರವರ ಹೆಂಡತಿ ಕಮಲಮ್ಮರವರ ಸ್ವಯಾರ್ಜಿತ ಸ್ವತ್ತಾಗಿದ್ದರಿಂದ, ಸದರಿ ಸ್ವತ್ತಿನ ಮೇಲೆ 1 ರಿಂದ 3 ನೇ ವಾದಿ ಹಾಗೂ 1 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇಲ್ಲ ಹಾಗೂ 4 ಮತ್ತು 5 ನೇ ವಾದಿಯರಿಗೆ ಮಾತ್ರ ಹಕ್ಕು ಇದೆ ಎಂದರೆ ಸುಳ್ಳು. ವಾದಿಯರು ದಾವಾಸ್ವತ್ತುಗಳಲ್ಲಿ ಭಾಗ ಕೇಳಿದ್ದರಿಂದ ಅದರಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ಹೇಳಿ ಪ್ರತಿವಾದ ಪತ್ರದಲ್ಲಿ ಈ ಸ್ವತ್ತುಗಳನ್ನು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳಲ್ಲಿ ವಾದಿಗಳಿಗೆ ಭಾಗ ಇದ್ದರೂ ಸಹ ಅದನ್ನು ಸೇರಿಸಿ, 1 ರಿಂದ 5 ನೇ ಪ್ರತಿವಾದಿಗಳು ಶಾಮೀಲಾಗಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳಲ್ಲಿ ವಾದಿಗಳಿಗೆ ಭಾಗಾಂಶದ ಹಕ್ಕು ಇದೆ ಎಂದರೆ ಸುಳ್ಳು. ಪ್ರತಿವಾದ ಪತ್ರದ ಎ ಷೆಡ್ಯೂಲ್ ಸ್ವತ್ತುಗಳನ್ನು ಅಜ್ಜನಾಯಕರವರು ಅವರ ಜೀವಿತ ಅವಧಿಯಲ್ಲಿ ಅವರ ಮಕ್ಕಳಿಗೆ ಭಾಗ ಮಾಡಿಕೊಟ್ಟಿದ್ದು, ಆ ಸಂದರ್ಭದಲ್ಲಿ ನನ್ನ ತಾಯಿ ಮತ್ತು 1 ಮತ್ತು 2 ನೇ ವಾದಿಗಳಿಗೆ ಚಿನ್ನ ಮತ್ತು ಹಣವನ್ನು ಅವರ

ಭಾಗಾಂಶವಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ತಿಳಿದು, ಪ್ರತಿವಾದ ಪತ್ರದಲ್ಲಿರುವ ಸ್ವತ್ತುಗಳನ್ನು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ.

7) ಅಜ್ಜನಾಯಕರವರ ಇಬ್ಬರು ಹೆಣ್ಣು ಮಕ್ಕಳಾದ ಗೌರಮ್ಮ ಮತ್ತು ಕೆಂಪಮ್ಮರವರು ಸುಮಾರು 45-50 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ಅವರ ಮಕ್ಕಳು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರು ಅಲ್ಲ ಎಂದರೆ ಸರಿಯಲ್ಲ. ಆದ್ದರಿಂದ ದಾವಾಸ್ವತ್ತುಗಳಲ್ಲಿ ನನ್ನ ತಾಯಿಯೊಂದಿಗೆ 1 ರಿಂದ 5 ನೇ ವಾದಿಗಳು ಸಮನಾದ ಭಾಗವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ನನ್ನ ತಾಯಿಗೆ ತೊಂದರೆಯಾಗಬಾರದು ಎಂದು ಹಾಗೂ ನಾನು ಸದರಿ ಕ್ರಯಪತ್ರದಲ್ಲಿ ಪಾಲುದಾರನಾಗಿ ಸಹಿ ಮಾಡಿದ್ದರಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8) ದಾವಾಸ್ವತ್ತು ಮೊದಲು ಹಳೆಯ ಹೆಂಚಿನ ಮನೆಯಾಗಿತ್ತು ಎಂದರೆ ಸರಿ. 6 ನೇ ಪ್ರತಿವಾದಿ ಈಗ ಹಳೆ ಮನೆಯನ್ನು ಕೆಡವಿ ಆರ್.ಆರ್.ಸಿ. ಮನೆಯನ್ನು ಕಟ್ಟಿಸಿರುತ್ತಾರೆ ಎಂದರೆ ಸರಿ. 6 ನೇ ಪ್ರತಿವಾದಿ ಹೊಸ ಮನೆ ಕಟ್ಟಿಸುವಾಗ ವಾದಿಗಳಿಗೆ ದಾವಾಸ್ವತ್ತನ್ನು ಮಾರಾಟ ಮಾಡಿದ ವಿಷಯ ಗೊತ್ತಾಗಿತ್ತು ಎಂದರೆ ಸುಳ್ಳು. 6 ನೇ ಪ್ರತಿವಾದಿಯಿಂದ ಹೆಚ್ಚಿನ ಹಣ ಪಡೆದು ದಾವಾಸ್ವತ್ತನ್ನು ಮಾರಾಟ ಮಾಡಿರುವುದರಿಂದ ಅವರಿಗೆ ತೊಂದರೆಯಾಗಬಾರದು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ**.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.